**1 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**

**ಜೆ.ಎಂ.ಎಫ್.ಸಿ. ನ್ಯಾಯಾಲಯ, ಹುಬ್ಬಳ್ಳಿ**

**OS-121/2024** **PW-1**

**ದಿಃ 28.07.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.**

**ಪಾಟೀ ಸವಾಲುಃ 5 ನೇ ಪ್ರತಿವಾದಿ ಪರ ಶ್ರೀ ಜಿ ಎಸ್ ಜೆ ವಕೀಲರಿಂದಃ**

1. ನಾನು 7 ನೇ ತರಗತಿವರೆಗೆ ವಿದ್ಯಾಬ್ಯಾಸ ಮಾಡಿರುತ್ತೇನೆ. ನನಗೆ ಆಂಗ್ಲ ಬಾಷೆ ಹಾಗೂ ಕನ್ನಡ ಓದಲು ಬರುತ್ತದೆಂದರೆ ಸಾಕ್ಷಿ ಕನ್ನಡ ಅಷ್ಟೇ ಬರುತ್ತದೆ ಆಂಗ್ಲ ಬಾಷೆ ಬರುವದಿಲ್ಲ ಎನ್ನುತ್ತಾರೆ. ದಾವಾ ಸಲ್ಲಿಸಲು ಹಾಗೂ ಸಾಕ್ಷಿ ಪ್ರಮಾಣ ಪತ್ರಕ್ಕೆ ಯಾರು ಮಾಹಿತಿ ಕೊಟ್ಟರೆಂದರೆ ಸಾಕ್ಷಿ ನಮ್ಮ ವಕೀಲರು ಎನ್ನುತ್ತಾರೆ. ಸದರಿ ದಾವೆಯನ್ನು ನನ್ನ ತಮ್ಮ ಯಾವ ಕಾರಣಕ್ಕೆ ಸಲ್ಲಿಸಿದ್ದಾರೆ ಯಾರ ಮೇಲೆ ಸಲ್ಲಿಸಿದ್ದಾರೆಂದರೆ ಸಾಕ್ಷಿ ದಾನ ಪತ್ರದ ಮೂಲಕ ನಾವು ಸ್ಲಂ ಬೋರ್ಡಗೆ ಹೊಲ ಕೊಟ್ಟಿದ್ದೆವು ಅದನ್ನು ಈಗ ನಾವು ವಾಪಸು ಕೇಳುತ್ತಿದ್ದೇವೆ ಎನ್ನುತ್ತಾರೆ. ಯಾವ ಆದಾರದ ಮೇಲೆ ಸಾಕ್ಷಿ ಹೇಳುತ್ತಿದ್ದೀರಿ ಎಂದರೇ ಸಾಕ್ಷಿ ನನ್ನ ತಮ್ಮ ಬರಲು ಆಗುವದಿಲ್ಲ ಎಂಬ ಕಾರಣಕ್ಕೆ ನಾನು ಸಾಕ್ಷಿ ಹೇಳಲು ಬಂದಿರುತ್ತೇನೆ ಎನ್ನುತ್ತಾರೆ. ನಾನು ಹಾಗೂ ನನ್ನ ತಮ್ಮ ಹುಬ್ಬಳ್ಳಿಯಲ್ಲಿ ಒಕ್ಕಲುತನ ಮಾಡುತ್ತೇವೆ.

2. ದಾವಾ ಆಸ್ತಿಯ ಸರ್ವೆ ನಂಬರ ಹಾಗೂ ಚಕಬಂದಿ ಹೇಳಲು ಬರುತ್ತದೆಯಾ ಎಂದರೆ ಸಾಕ್ಷಿ ಸರ್ವೆ ನಂಃ63/1 ಹಾಗೂ 63/2 ಎನ್ನುತ್ತಾರೆ. ದಾವೆಯನ್ನು ನ್ಯಾಯಾಲಯಕ್ಕೆ ನನ್ನ ತಮ್ಮ ಯೂವ ಯಾವ ದಾಖಲೆಗಳನ್ನು ನೋಡಿ ಸಲ್ಲಿಸಿದ್ದಾರೆಂದು ತಿಳಿದುಕೊಂಡಿರಾ ಎಂದರೆ ಸಾಕ್ಷಿ ತಿಳಿದುಕೊಂಡಿದ್ದೇನೆ ಎನ್ನುತ್ತಾರೆ. 2012 ನೇ ಸಾಲಿನ ನಾಲ್ಕನೇ ತಿಂಗಳನಲ್ಲಿ ನನ್ನ ತಮ್ಮ ದಾನಪತ್ರ ಮಾಡಿದರು. ಆ ದಾಖಲೆಗೆ ನೀವು ಸಾಕ್ಷಿಯಾಗಿ ಸಹಿ ಮಾಡಿದ್ದೀರಾ ಎಂದರೇ ಸಾಕ್ಷಿ ನಾನು ಸಹಿ ಮಾಡಿದ್ದೇನೆ ಎನ್ನುತ್ತಾರೆ. ಸಾಕ್ಷಿಗೆ ನಿಪಿ 2 ನ್ನು ತೋರಿಸಿ ಅದರಲ್ಲಿ ನಿಮ್ಮ ಸಹಿ ಇದೆಯಾ ಎಂದರೆ ಸಾಕ್ಷಿ ಅದನ್ನು ನೋಡಿ ಅದರಲ್ಲಿ ಇಲ್ಲ ಎನ್ನುತ್ತಾರೆ. ಬಕ್ಷೀಸ್ ಪತ್ರದಲ್ಲಿ ಎನು ಬರೆದಿದೆ ಎಂದು ತಿಳಿದುಕೊಂಡಿರಾ ಎಂದರೆ ಸಾಕ್ಷಿ ತಿಳಿದುಕೊಂಡಿದ್ದೇನೆ ಎನ್ನುತ್ತಾರೆ. ನಿಪಿ 2 ರಲ್ಲಿ ದಾಖಲೆ ಆ ದಿನದಂದೇ ಪ್ರತ್ಯಕ್ಷ ಕಬ್ಜಾ ಪ್ರತಿವಾದಿಯರಿಗೆ ಕೊಡಲಾಗಿದೆ ಎಂದು ನಮೂದು ಎಂದರೆ ಸರಿ. ಸದರಿ ಬಕ್ಷೀಸ್ ಪತ್ರವನ್ನು ಯಾರು ಯಾರಿಗೆ ಬರೆದುಕೊಟ್ಟರೆಂದರೆ ಸಾಕ್ಷಿ ನನ್ನ ತಮ್ಮರಾದ ಮಂಜುನಾಥ ಮತ್ತು ರಮೇಶ ಇವರು ಕರ್ನಾಟಕ ಸರಕಾರದ ಸ್ಲಂ ಬೋರ್ಡಗೆ ಬರೆದುಕೊಟ್ಟಿರುತ್ತಾರೆಂದು ಸಾಕ್ಷಿ ನುಡಿಯುತ್ತಾರೆ. ರಾಜ್ಯ ಸರಕಾರ ಅಥವಾ ಸ್ಲಂ ಬೋರ್ಡ ಪರವಾಗಿ ಆ ದಾಖಲೆಗೆ ಯಾರು ಸಹಿ

ಮಾಡಿರುತ್ತಾರೆಂದರೆ ಸಾಕ್ಷಿ ಶುಂಬುಲಿಂಗಯ್ಯ ಎನ್ನುವವರು ಮಾಡಿರುತ್ತಾರೆ ಎನ್ನುತ್ತಾರೆ. ಸದರಿ ನಿಪಿ 2 ನಮ್ಮ ಉಪಸ್ಥಿತಿಯಲ್ಲಿ ಆಗಿಲ್ಲ ಎಂದರೆ ಸಾಕ್ಷಿ ಆಗಿದೆ ಎನ್ನುತ್ತಾರೆ. ಸದರಿ ದಾನಪತ್ರ ಅಂದರೆ ನಿಪಿ 2 ನನ್ನ ಉಪಸ್ಥಿತಿಯಲ್ಲಿ ಆಗಿದೆ ಎಂದು ತೋರಿಸಲು ನ್ಯಾಯಾಲಯಕ್ಕೆ ದಾಖಲೆ ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ಬಕ್ಷೀಸ್ ಪತ್ರ ನನ್ನ ಉಪಸ್ಥಿತಿಯಲ್ಲಿ ಆಗಿಲ್ಲ ಹಾಗೂ ನಾನು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಸದರಿ ದಾವಾ ಆಸ್ತಿ ಇವತ್ತಿಗೆ ಯಾರ ಹೆಸರಿನಲ್ಲಿದೆ ಎಂದರೆ ಸಾಕ್ಷಿ ಕರ್ನಾಟಕ ಸರಕಾರದ ಹೆಸರಿನಲ್ಲಿದೆ ಎನ್ನುತ್ತಾರೆ. ಸದರಿ ಆಸ್ತಿಯನ್ನು ಮರಳಿ ಕೊಡಬೇಕೆಂದು ಸರಕಾರದವರು ಯಾವದೇ ನಡಾವಳಿ ಹೊರಡಿಸಿಲ್ಲ ಎಂದರೆ ಸಾಕ್ಷಿ ಯಾವದೇ ನಡಾವಳಿ ಬಂದಿಲ್ಲ ನಾವು ಈಗ ಕೇಸು ದಾಖಲಿಸಿದ್ದೇವೆ ಎನ್ನುತ್ತಾರೆ. ಈ ದಾವಾ ಸಲ್ಲಿಸಲು ನನ್ನ ತಮ್ಮ ವಾದಿಗೆ ಯಾವದೇ ದಾವಾ ಕಾರಣ ಉದ್ಭವವಾಗಿಲ್ಲ ಎಂದರೆ ಸಾಕ್ಷಿ ಅದು ಸರಿಯಲ್ಲ ಆದರೂ ನಾವು ಸುಳ್ಳು ಕೇಸು ದಾಖಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸಾಕ್ಷಿ ಸುಳ್ಳು ಎನ್ನುತ್ತಾರೆ. ಸದರಿ ದಾವಾ ಆಸ್ತಿ ಪ್ರತಿವಾದಿಯ ಕಬ್ಜಾದಲ್ಲಿದೆ ಎಂದರೆ ಸಾಕ್ಷಿ ಮೊದಲು ಹೌದು ಎಂದು ನುಡಿದು ನಂತರ ನಾವು ಇದ್ದೇವೆ ಎನ್ನುತ್ತಾರೆ. ನಾವು ಕಬ್ಜಾದಲ್ಲಿದ್ದೇವೆಂದು ತೋರಿಸಲು ನ್ಯಾಯಾಲಯಕ್ಕೆ ಯಾವದಾದರೂ ದಾಖಲೆಗಳನ್ನು ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿ ಹಾಜರುಪಡಿಸಿಲ್ಲ ಎನ್ನುತ್ತಾರೆ. ನಾವು ದಾವಾ ಆಸ್ತಿಯ ಕಬ್ಜಾದಲ್ಲಿ ಇಲ್ಲ ಆದರೂ ಕಬ್ಜಾದಲ್ಲಿದ್ದೇವೆಂದು ಸುಳ್ಳು ಹೇಳುತ್ತಿದ್ದೇನೆಂದರೆ ಸಾಕ್ಷಿ ನೀವು ಹೇಳುವದು ಸುಳ್ಳು ಎನ್ನುತ್ತಾರೆ.

**ಮುಂದುವರೆದ ಪಾಟೀ ಸವಾಲುಃ ವಾದಿ ಪರ ವಕೀಲರು ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು ಕಾಲಾವಕಾಶ ನೀಡಲಾಯಿತು.**

(ನನ್ನ ಉಕ್ತಲೇಖದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೆ ಸರಿ ಇದೆ.

1 ನೇ ಅಧಿಕ ಹಿ.ದಿ.ನ್ಯಾ.ಹುಬ್ಬಳ್ಳಿ.

**1 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**

**ಜೆ.ಎಂ.ಎಫ್.ಸಿ. ನ್ಯಾಯಾಲಯ, ಹುಬ್ಬಳ್ಳಿ**

**OS**-122/2024 **PW**-1

**ದಿಃ 28.07.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.**

**ಪಾಟೀ ಸವಾಲುಃ 5 ನೇ ಪ್ರತಿವಾದಿ ಪರ ಶ್ರೀ ಜಿ ಎಸ್ ಜೆ ವಕೀಲರಿಂದಃ**

**1.** ನಾನು 7 ನೇ ತರಗತಿವರೆಗೆ ವಿದ್ಯಾಬ್ಯಾಸ ಮಾಡಿರುತ್ತೇನೆ. ನನಗೆ ಆಂಗ್ಲ ಬಾಷೆ ಹಾಗೂ ಕನ್ನಡ ಓದಲು ಬರುತ್ತದೆಂದರೆ ಸಾಕ್ಷಿ ಕನ್ನಡ ಅಷ್ಟೇ ಬರುತ್ತದೆ ಆಂಗ್ಲ ಬಾಷೆ ಬರುವದಿಲ್ಲ ಎನ್ನುತ್ತಾರೆ. ದಾವಾ ಸಲ್ಲಿಸಲು ಹಾಗೂ ಸಾಕ್ಷಿ ಪ್ರಮಾಣ ಪತ್ರಕ್ಕೆ ಯಾರು ಮಾಹಿತಿ ಕೊಟ್ಟರೆಂದರೆ ಸಾಕ್ಷಿ ನಮ್ಮ ವಕೀಲರು ಎನ್ನುತ್ತಾರೆ. ಸದರಿ ದಾವೆಯನ್ನು ನನ್ನ ತಮ್ಮ ಯಾವ ಕಾರಣಕ್ಕೆ ಸಲ್ಲಿಸಿದ್ದಾರೆ ಯಾರ ಮೇಲೆ ಸಲ್ಲಿಸಿದ್ದಾರೆಂದರೆ ಸಾಕ್ಷಿ ದಾನ ಪತ್ರದ ಮೂಲಕ ನಾವು ಸ್ಲಂ ಬೋರ್ಡಗೆ ಹೊಲ ಕೊಟ್ಟಿದ್ದೆವು ಅದನ್ನು ಈಗ ನಾವು ವಾಪಸು ಕೇಳುತ್ತಿದ್ದೇವೆ ಎನ್ನುತ್ತಾರೆ. ಯಾವ ಆದಾರದ ಮೇಲೆ ಸಾಕ್ಷಿ ಹೇಳುತ್ತಿದ್ದೀರಿ ಎಂದರೇ ಸಾಕ್ಷಿ ನನ್ನ ತಮ್ಮ ಬರಲು ಆಗುವದಿಲ್ಲ ಎಂಬ ಕಾರಣಕ್ಕೆ ನಾನು ಸಾಕ್ಷಿ ಹೇಳಲು ಬಂದಿರುತ್ತೇನೆ ಎನ್ನುತ್ತಿರೆ. ನಾನು ಹಾಗೂ ನನ್ನ ತಮ್ಮ ಹುಬ್ಬಳ್ಳಿಯಲ್ಲಿ ಒಕ್ಕಲುತನ ಮಾಡುತ್ತೇವೆ.

2. ದಾವಾ ಆಸ್ತಿಯ ಸರ್ವೆ ನಂಬರ ಹಾಗೂ ಚಕಬಂದಿ ಹೇಳಲು ಬರುತ್ತದೆಯಾ ಎಂದರೆ ಸಾಕ್ಷಿ ಸರ್ವೆ ನಂಃ63/1 ಹಾಗೂ 63/2 ಎನ್ನುತ್ತಾರೆ. ದಾವೆಯನ್ನು ನ್ಯಾಯಾಲಯಕ್ಕೆ ನನ್ನ ತಮ್ಮ ಯೂವ ಯಾವ ದಾಖಲೆಗಳನ್ನು ನೋಡಿ ಸಲ್ಲಿಸಿದ್ದಾರೆಂದು ತಿಳಿದುಕೊಂಡಿರಾ ಎಂದರೆ ಸಾಕ್ಷಿ ತಿಳಿದುಕೊಂಡಿದ್ದೇನೆ ಎನ್ನುತ್ತಾರೆ. 2012 ನೇ ಸಾಲಿನ ನಾಲ್ಕನೇ ತಿಂಗಳನಲ್ಲಿ ನನ್ನ ತಮ್ಮ ದಾನಪತ್ರ ಮಾಡಿದರು. ಆ ದಾಖಲೆಗೆ ನೀವು ಸಾಕ್ಷಿಯಾಗಿ ಸಹಿ ಮಾಡಿದ್ದೀರಾ ಎಂದರೇ ಸಾಕ್ಷಿ ನಾನು ಸಹಿ ಮಾಡಿದ್ದೇನೆ ಎನ್ನುತ್ತಾರೆ. ಸಾಕ್ಷಿಗೆ ನಿಪಿ 2 ನ್ನು ತೋರಿಸಿ ಅದರಲ್ಲಿ ನಿಮ್ಮ ಸಹಿ ಇದೆಯಾ ಎಂದರೆ ಸಾಕ್ಷಿ ಅದನ್ನು ನೋಡಿ ಅದರಲ್ಲಿ ಇಲ್ಲ ಎನ್ನುತ್ತಾರೆ. ಬಕ್ಷೀಸ್ ಪತ್ರದಲ್ಲಿ ಎನು ಬರೆದಿದೆ ಎಂದು ತಿಳಿದುಕೊಂಡಿರಾ ಎಂದರೆ ಸಾಕ್ಷಿ ತಿಳಿದುಕೊಂಡಿದ್ದೇನೆ ಎನ್ನುತ್ತಾರೆ. ನಿಪಿ 2 ರಲ್ಲಿ ದಾಖಲೆ ಆ ದಿನದಂದೇ ಪ್ರತ್ಯಕ್ಷ ಕಬ್ಜಾ ಪ್ರತಿವಾದಿಯರಿಗೆ ಕೊಡಲಾಗಿದೆ ಎಂದು ನಮೂದು ಎಂದರೆ ಸರಿ. ಸದರಿ ಬಕ್ಷೀಸ್ ಪತ್ರವನ್ನು ಯಾರು ಯಾರಿಗೆ ಬರೆದುಕೊಟ್ಟರೆಂದರೆ ಸಾಕ್ಷಿ ನನ್ನ ತಮ್ಮರಾದ ಮಂಜುನಾಥ ಮತ್ತು ರಮೇಶ ಇವರು

ಕರ್ನಾಟಕ ಸರಕಾರದ ಸ್ಲಂ ಬೋರ್ಡಗೆ ಬರೆದುಕೊಟ್ಟಿರುತ್ತಾರೆಂದು ಸಾಕ್ಷಿ ನುಡಿಯುತ್ತಾರೆ. ರಾಜ್ಯ ಸರಕಾರ ಅಥವಾ ಸ್ಲಂ ಬೋರ್ಡ ಪರವಾಗಿ ಆ ದಾಖಲೆಗೆ ಯಾರು ಸಹಿ ಮಾಡಿರುತ್ತಾರೆಂದರೆ ಸಾಕ್ಷಿ ಶುಂಬುಲಿಂಗಯ್ಯ ಎನ್ನುವವರು ಮಾಡಿರುತ್ತಾರೆ ಎನ್ನುತ್ತಾರೆ. ಸದರಿ ನಿಪಿ 2 ನಮ್ಮ ಉಪಸ್ಥಿತಿಯಲ್ಲಿ ಆಗಿಲ್ಲ ಎಂದರೆ ಸಾಕ್ಷಿ ಆಗಿದೆ ಎನ್ನುತ್ತಾರೆ. ಸದರಿ ದಾನಪತ್ರ ಅಂದರೆ ನಿಪಿ 2 ನನ್ನ ಉಪಸ್ಥಿತಿಯಲ್ಲಿ ಆಗಿದೆ ಎಂದು ತೋರಿಸಲು ನ್ಯಾಯಾಲಯಕ್ಕೆ ದಾಖಲೆ ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ಬಕ್ಷೀಸ್ ಪತ್ರ ನನ್ನ ಉಪಸ್ಥಿತಿಯಲ್ಲಿ ಆಗಿಲ್ಲ ಹಾಗೂ ನಾನು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಸದರಿ ದಾವಾ ಆಸ್ತಿ ಇವತ್ತಿಗೆ ಯಾರ ಹೆಸರಿನಲ್ಲಿದೆ ಎಂದರೆ ಸಾಕ್ಷಿ ಕರ್ನಾಟಕ ಸರಕಾರದ ಹೆಸರಿನಲ್ಲಿದೆ ಎನ್ನುತ್ತಾರೆ. ಸದರಿ ಆಸ್ತಿಯನ್ನು ಮರಳಿ ಕೊಡಬೇಕೆಂದು ಸರಕಾರದವರು ಯಾವದೇ ನಡಾವಳಿ ಹೊರಡಿಸಿಲ್ಲ ಎಂದರೆ ಸಾಕ್ಷಿ ಯಾವದೇ ನಡಾವಳಿ ಬಂದಿಲ್ಲ ನಾವು ಈಗ ಕೇಸು ದಾಖಲಿಸಿದ್ದೇವೆ ಎನ್ನುತ್ತಾರೆ. ಈ ದಾವಾ ಸಲ್ಲಿಸಲು ನನ್ನ ತಮ್ಮ ವಾದಿಗೆ ಯಾವದೇ ದಾವಾ ಕಾರಣ ಉದ್ಭವವಾಗಿಲ್ಲ ಎಂದರೆ ಸಾಕ್ಷಿ ಅದು ಸರಿಯಲ್ಲ ಆದರೂ ನಾವು ಸುಳ್ಳು ಕೇಸು ದಾಖಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸಾಕ್ಷಿ ಸುಳ್ಳು ಎನ್ನುತ್ತಾರೆ. ಸದರಿ ದಾವಾ ಆಸ್ತಿ ಪ್ರತಿವಾದಿಯ ಕಬ್ಜಾದಲ್ಲಿದೆ ಎಂದರೆ ಸಾಕ್ಷಿ ಮೊದಲು ಹೌದು ಎಂದು ನುಡಿದು ನಂತರ ನಾವು ಇದ್ದೇವೆ ಎನ್ನುತ್ತಾರೆ. ನಾವು ಕಬ್ಜಾದಲ್ಲಿದ್ದೇವೆಂದು ತೋರಿಸಲು ನ್ಯಾಯಾಲಯಕ್ಕೆ ಯಾವದಾದರೂ ದಾಖಲೆಗಳನ್ನು ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿ ಹಾಜರುಪಡಿಸಿಲ್ಲ ಎನ್ನುತ್ತಾರೆ. ನಾವು ದಾವಾ ಆಸ್ತಿಯ ಕಬ್ಜಾದಲ್ಲಿ ಇಲ್ಲ ಆದರೂ ಕಬ್ಜಾದಲ್ಲಿದ್ದೇವೆಂದು ಸುಳ್ಳು ಹೇಳುತ್ತಿದ್ದೇನೆಂದರೆ ಸಾಕ್ಷಿ ನೀವು ಹೇಳುವದು ಸುಳ್ಳು ಎನ್ನುತ್ತಾರೆ.

**ಮುಂದುವರೆದ ಪಾಟೀ ಸವಾಲುಃ 5 ನೇ ಪ್ರತಿವಾದಿ ಪರ ವಕೀಲರು ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು ಕಾಲಾವಕಾಶ ನೀಡಲಾಯಿತು.**

(ನನ್ನ ಉಕ್ತಲೇಖದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೆ ಸರಿ ಇದೆ.

**1 ನೇ ಅಧಿಕ ಹಿ.ದಿ.ನ್ಯಾ.ಹುಬ್ಬಳ್ಳಿ.**